ಮಲಗಿರೋದು' ಎಂದಿತು.

ಈ ಎರಡು ಧ್ವನಿಗಳನ್ನು ಕೇಳಿಸಿಕೊಂಡಿದ್ದೇ ತಡ ಸ್ಮಶಾನದಲ್ಲಿದ್ದ ಅನೇಕ ಆಕೃತಿಗಳು ಸರತಿಯ ಪ್ರಕಾರ ಒಂದೊಂದಾಗಿ ಮಾತನಾಡತೊಡಗಿದವು. ಸಹನಾ ಮತ್ತು ಸಮರ್ಥ್ ಇಬ್ಬರಿಗೂ ಕೇಳಿಸಿಕೊಳ್ಳುವುದನ್ನು ಬಿಟ್ಟು ಬೇರೇನೂ ಮಾಡಲಾಗದ ಅಸಹಾಯಕ ಸ್ಥಿತಿಯಾಯಿತು.

***

'ಕೇಳಿದಷ್ಟು ವರದಕ್ಷಿಣೆ ಕೊಟ್ಟರೂ, ಅತ್ತೆ ಮಾವನ ಜೊತೆ ಸೇರಿ ಕಿರುಕುಳ ಕೊಡ್ತಿದ್ದ ಗಂಡನಿಂದ ಮುಕ್ತಿ ಬೇಕಿತ್ತು. ಮದುವೆಯಿಂದ ಹೊರಬಂದೆ' ಎಂದಳಾಕೆ.

'ನಾನ್ ಬೇಡ, ನನ್ ಮನೆ ಬೇಡ, ನನ್ ಜೊತೆ ಆಗಿದ್ದ ಮದುವೆನೂ ಬೇಡ. ಆದ್ರೆ ಡಿವೋರ್ಸ್ ಕೊಟ್ಟಾಗ ನನ್ನಿಂದ ಜೀವನಾಂಶ ಮಾತ್ರ ಬೇಕಾಗಿತ್ತು ಅವಳಿಗೆ. ನನ್ನ ಆಸ್ತಿ ಎಲ್ಲಾ ಅದ್ನ ಹೊಂದಿಸಿ ಕೊಡೋದ್ರಲ್ಲೇ ಖಾಲಿ ಆಯ್ತು' ಎಂದನಾತ.

'ನಾನ್ ಓದಿದ್ ಕೋರ್ಸಿಗೂ, ಅವ್ಳು ಓದಿದ್ ಕೋರ್ಸಿಗೂ ಸಂಬಂಧಾನೇ ಇಲ್ಲ. **We didn't gel at all.** ಇದ್ನ ನಾನ್ ಮದುವೆಗೂ ಮುಂಚೆ ಹೇಳಿದ್ದೆ. ಆದ್ರೆ ನಮ್ ಮನೆವ್ರೆಲ್ಲ ಸೇರಿ ಓದೋದಕ್ಕೂ, ಬದ್ಕೋದಕ್ಕೂ ಸಂಬಂಧ ಇಲ್ಲ ಅಂತ ಏನೇನೋ ಹೇಳಿ ಗಂಟಾಕಿದ್ರು. ನಾನ್ ಡಿವೋರ್ಸ್ ಕೊಡ್ಲಿಲ್ಲ. ಜೀವನಾಂಶನೂ ಕೇಳ್ಲಿಲ್ಲ. ನನ್ ಕಾಲ್ ಮೇಲೆ ನಿಂತ್ಕೊಂಡೇ ನಾನ್ ಬದ್ಕಿದೆ'.

'ಮಗು ಬಗ್ಗೆ ಸ್ವಲ್ಪಾನೂ ಕೇರ್ ತಗೊಳ್ತಿರ್ಲಿಲ್ಲ. ಯಾವಾಗ್ಲೂ ಅವಳ ಬಗ್ಗೆ, ಅವಳ ಫ್ರೆಂಡ್ಸ್, ಪಾರ್ಟಿ ಅಂತ ತಿರುಗ್ತಿದ್ಲು. ಯಾವ್ಯಾವ್ದೋ ಗಂಡಸರನ್ನ ನೋಡಿ ನಗ್ತಿದ್ಲು. ಒಂದೇ ಹೊಡ್ತಕ್ಕೆ ಸಾಯಿಸಿಬಿಟ್ಟೆ. ಮಗುನ ನಾನೇ ಬೆಳ್ಸಿದೆ. ಅಮ್ಮ ಇಲ್ಲ ಅನ್ನೋ ಕೊರತೆ ಅದ್ಕೆ ಬರದಿರೋ ಹಾಗೆ ಬೆಳ್ಸಿದ್ದೆ. ಅವ್ನ್ ದೊಡ್ಡವನಾದ್ಮೇಲೆ ನಾನ್ ಅವರಮ್ಮನಕೊಂದಿದ್ದೀನಿಅನ್ನೋವಿಷ್ಯನಯಾರೋ ಹೇಳಿರ್ಬೇಕು. ನನ್ ಹತ್ರ ಮಾತಾಡೋದ್ನೆ ನಿಲ್ಸಿದ. ನಾನು ಉಸಿರು ನಿಲ್ಸಿದೆ'.

'ಆಫೀಸಲ್ಲಿ ಎರಡ್ಮೂರು ಹೆಂಗಸರ ಜೊತೆ ಅಫೇರ್ ಇಟ್ಕೊಂಡಿದ್ದ. ಮೊಬೈಲ್ ಮುಟ್ಟಿದ್ರೆ ಕೆಂಡ ಕಾರ್ತಿದ್ದ. ಅವನ ಮೊಬೈಲ್ ಪಾಸ್‌ವರ್ಡ್ ಪ್ರತಿದಿನ ಚೇಂಜ್ ಮಾಡ್ತಿದ್ದ. ಟೆಂಡರ್‌ನಲ್ಲಿ ಸ್ವೈಪ್ ರೈಟ್ ಮಾಡಿ ಒಂದಿನ ರೆಡ್ ಹ್ಯಾಂಡಲ್ಲಿ ಸಿಗಾಕ್ಕೊಂಡಾಗ ಆಫೀಸ್ ಮುಂದೆ ಹೋಗಿ ಧರಣಿ ಕೂತೆ. ಎಲ್ರೂ ಸೇರಿ ನನ್ನ ನ್ಯೂಟ್ರಲ್ ಮಾಡಿದ್ರು. ಆದ್ರೆ ಅವನ ಚಾಳಿ ಮುಂದುವರೆದಿತ್ತು. ನಮ್ ಮದ್ವೆ ಮುರಿದು ಬಿದ್ದಿತ್ತು.'

ಈ ಮಾತುಗಳನ್ನು ಕೇಳಿದಾಕ್ಷಣ ಸಹನಾ ಒಮ್ಮೆ ಸಮರ್ಥ್‌ನ ಮುಖ ನೋಡಿ, ಅನಂತರ ಅವನ ಕೈಯಲ್ಲಿದ್ದ ಮೊಬೈಲ್ ಕಡೆ ದೃಷ್ಟಿ ನೆಟ್ಟಳು. ಇದನ್ನು ಅರ್ಥ ಮಾಡಿಕೊಂಡ ಸಮರ್ಥ್ ತನ್ನ ಕಾಂಟ್ಯಾಕ್ಟ್ ಲಿಸ್ಟ್‌ಗೆ ಹೋಗಿ **Wax** ಎನ್ನುವ ನಂಬರನ್ನು ಡಿಲೀಟ್ ಮಾಡಿದ. ಅಷ್ಟರಲ್ಲಿ ಸ್ಮಶಾನದಲ್ಲಿನ ಮತ್ತೆ ಕೆಲವು ಆಕೃತಿಗಳ ಮಾತುಗಳು ಕೇಳಿ ಬಂದವು.

'ಮದುವೆಗೆ ಮುಂಚೆನೆ ನಾನ್ ಹೇಳಿದ್ದೆ, ನಾನ್ ಮಾಡ್ರನ್ ಡ್ರೆಸ್ ಹಾಕೋಳು ಅಂತ. ಅದ್ಕೆಲ್ಲ ಒಪ್ಪಿಗೆ ಇದೆ ಅಂತ್ಹೇಳಿ, ಆಮೇಲೆ ನೋಡಿದ್ರೆ ಅದ್ಕೆ ಕ್ಯಾತೆ ತೆಗೆದ. ಅವಾಗ್ಲೂ ನಾನು ಕ್ಯಾರೆ ಅನ್ನಲಿಲ್ಲ. ಒಂದಿನ ನಾನಿಲ್ದಿದ್ದಾಗ ನನ್ನ ಮಾಡ್ರನ್ ಡ್ರೆಸ್‌ನೆಲ್ಲಾ ಸುಟ್ಟು ಹಾಕಿದ್ದ. ನಾನು, ಅವನ ನೆನಪುಗಳನ್ನೇ ಸುಟ್ಟು ಹಾಕಿದೆ'.

'ನನಗೆ ಇಷ್ಟು ಬೇಗ ಮಗು ಬೇಡ ಅಂದ್ಲು. ಒಂದೆರಡು ವರ್ಷ ಆದ್ಮೇಲೆ, ನನಗೆ ಮಗು ಮಾಡ್ಕೊಳ್ಳೋಕೆ ಇಷ್ಟ ಇಲ್ಲ, **Let's not have kids at all'** ಅಂದ್ಲು. ಮಕ್ಕಳೇ ಬೇಡ ಅನ್ನೋದಾದ್ರೆ ಮದುವೆ ಯಾಕ್ ಆಗ್ಬೇಕಿತ್ತು? ಹಾಗಾಗಿ ಆ ಮದುವೆಗೆ ಅರ್ಥ ಉಳಿಲೇ ಇಲ್ಲ'.

'ಮದ್ವೆ ಆಗಿ ಎಂಟು ವರ್ಷ ಆದ್ರೂ ಮಕ್ಕಳಾಗಿರಲಿಲ್ಲ. ಡಾಕ್ಟ್ರು ನಂದೇನೂ ಸಮಸ್ಯೆ ಇಲ್ಲ ಅಂದ್ರು. ಅವನಿಗೊಂದ್ ಸಲ ಚೆಕಪ್ ಮಾಡ್ಸೋಣ ಅಂದಿದ್ಕೆ, ಗಂಡಸಿಂದೇನ್ ಪ್ರಾಬ್ಲಮ್ ಇರುತ್ತೆ ಅಂತ ಹೇಳಿ ಕೊನೆಗೂ ಟೆಸ್ಟ್‌ಗೆ ಒಪ್ಪಲೇ ಇಲ್ಲ'.

'ಮದ್ವೆ ಮುಂಚೆ ನನ್ನ ಸ್ಯಾಲರಿ ಸರ್ಟಿಫಿಕೇಟ್, ಇನ್‌ಕಮ್ ಟ್ಯಾಕ್ಸ್ ರಿಟರ್ನ್ಸ್ ಡೀಟೆಲ್ಸ್, ಫುಲ್ ಬಾಡಿ ಚೆಕಪ್ ಮೆಡಿಕಲ್ ಸರ್ಟಿಫಿಕೇಟ್ ಬೇಕೇಬೇಕು ಅಂತ ಡಿಮ್ಯಾಂಡ್ ಇಟ್ಟಿದ್ಲು. ಆ ಟೈಮಲ್ಲಿ ಅದ್ನೆಲ್ಲ ಫುಲ್‌ಫಿಲ್ ಮಾಡಿದೆ. ಆದ್ರೆ ಆಮೇಲೆ ನನ್ಗೆ ಏಡ್ಸ್ ಏನಾದ್ರು ಇದ್ಯಾ ಅಂತ ತಿಳ್ಕೊಳ್ಳೋಕೆ ಅವ್ಳು ಈ ಟೆಸ್ಟ್ ಮಾಡ್ಸಿದ್ಲು ಅಂತ ಗೊತ್ತಾಯ್ತು. ಅಂಥವಳ ಜೊತೆ ಬದುಕೋಗುತ್ತಾ? ಬಿಟ್ಬುಬಿಟ್ಟೆ ಅವಳನ್ನ.'

'ನಾನ್ ವರ್ಜಿನ್ ಹೌದೋ ಅಲ್ವಾ ಅಂತ ತಿಳಕೊಳ್ಬೇಕು ಅಂತ ಮದುವೆ ಸಮಯದಲ್ಲಿ ಪರೋಕ್ಷವಾಗಿ ಅಪ್ರೋಚ್ ಮಾಡಿದ್ದ. ನಿನ್ನ ವರ್ಜಿನಿಟಿ ಹೇಗ್ ಚೆಕ್ ಮಾಡೋದು ಅಂತ ಕೇಳಿದ್ಕೆ ಮದುವೆ ನಡೀಲೇ ಇಲ್ಲ.'

'ಪ್ರೀತಿಸಿ ಮದ್ವೆ ಆದವರು ನಾವು. ಪರ್ವತದಷ್ಟು ಪ್ರೀತಿಸ್ತೀನಿ ಅಂತ ಬಾಯಲ್ಲಿ ಹೇಳ್ತಿದ್ದ, ಆದ್ರೆ ಪುಡಿಗಾಸು ಸಂಪಾದಿಸ್ತಿದ್ದ. ಎಲ್ಲಾದ್ರೂ ಸರಳತೆ, ಸರಳ ಜೀವನ ಅಂತಿದ್ದ. ಕೈಯಲ್ಲಿ ದುಡ್ಡಿಲ್ದಿರೋನು ಸರಳ ಜೀವನ ನಡೆಸಬೇಕು ಅಂತ ಹೇಳೋದನ್ನ ತುಂಬಾ ದಿನ ಸಹಿಸಿಕೊಳ್ಳೋಕೆ ಆಗಲಿಲ್ಲ. ಫ್ರೆಂಡ್ಸ್ ಎಲ್ಲರ ಎದುರು ವಿಶೇಷವಾಗಿ ಬದುಕಬೇಕು ಅಂತ ಆಸೆ ಇದ್ದ ನಾನು ಅವನಿಗೆ ವಿದಾಯ ಹೇಳಲೇಬೇಕಾಯ್ತು.'

'ಮದುವೆಗೆ ಮುಂಚೆ ಪ್ರೀತಿಸುವಾಗ ನಮ್ ಅಪ್ಪ ಅಮ್ಮನ್ನ ತುಂಬಾ ಗೌರವದಿಂದ ಕಾಣ್ತಿದ್ರು. ನನ್ಗಿಂತ ಹೆಚ್ಚು ಅವ್ರೇ ಅವಳಿಗೆ ಪ್ರೀತಿ ತೋರಿಸ್ತಾ ಇದ್ರು. ನಮ್ ಪ್ರೀತಿಗೆ ಅಡ್ಡಿಯಾಗಿದ್ದ ಜಾತಿಯ ಸಮಸ್ಯೆಯನ್ನೂ ಅವರೇ ಹೋರಾಡಿ ಬಗೆಹರಿಸಿ ನಮ್ಮ ಮದ್ವೆ ಮಾಡಿಕೊಟ್ಟಿದ್ರು. ಆದರೆ ಮದ್ವೆ ಆದ್ಮೇಲೆ ಇವ್ಳು ಅವರನ್ನ ತುಂಬಾ ಕೀಳಾಗಿ ಕಾಣೋಕ್ ಶುರು ಮಾಡಿದ್ಲು. ಮೊದಲಿದ್ದ ಕಾಳಜಿ ಕೇವಲ ನಾಟಕವಾಗಿತ್ತು ಅನ್ನೋದು ಆಗ ಗೊತ್ತಾಯ್ತು. ವಿಪರೀತ ಕಮರ್ಷಿಯಲ್ ಲೆಕ್ಕಾಚಾರ ಮಾಡ್ತಿದ್ಲು. ಅಪ್ಪ ಅಮ್ಮಂಗೆ ಊಟ ಹಾಕೋದ್ನ ಲೆಕ್ಕ ಹಾಕೋಕೆ ಆಗುತ್ತಾ? ಅವಳ ಲೆಕ್ಕಾಚಾರ ನನಗೆ ಹೊಂದಿಕೆ ಆಗಲಿಲ್ಲ. ಎರಡನೇ ವರ್ಷದ ಆ್ಯನಿವರ್ಸರಿಗೆ ನಾವು ಜೊತೆಲಿರ್ಲಿಲ್ಲ.'

'ಒಬ್ಬಳೇ ಹೆಣ್ಣು ಮಗಳಿದ್ದ ನನ್ನನ್ನು, ನಮ್ಮ ಅಪ್ಪ ಮಾಡಿಟ್ಟಿದ್ದ ತೋಟಮನೆ ಮೇಲೆ ಕಣ್ಣಿಟ್ಟು ಮದುವೆಯಾಗಿದ್ದ ಅವನು. ನನ್ ಮೇಲೆ ಪ್ರೀತಿ ಇರ್ಲಿಲ್ಲ. ಇದು ಗೊತ್ತಾದ್ಮೇಲೆ ನಮ್ ಆಸ್ತಿನಾ ಅವನ ಹೆಸರಿಗೆ ಮಾಡಿಕೊಡೋಕ್ ನಾನು ಒಪ್ಲಿಲ್ಲ. ಅಲ್ಲಿಗೆ ಮದ್ವೆ ಮುರ್ದ್ ಬಿತ್ತು.'

'ಕೋಟಿಗಟ್ಟಲೆ ಖರ್ಚು ಮಾಡಿ ಅರಮನೆಗಳ ನಗರಿ ಜೈಪುರದಲ್ಲಿ ಡೆಸ್ಟಿನೇಷನ್ ವೆಡ್ಡಿಂಗ್ ಮಾಡಿಕೊಂಡಿದ್ವಿ. ಬಂದೋರೆಲ್ಲ ಎಷ್ಟು ವೈಭವದಿಂದ ನಡೀತು ಮದುವೆ ಅಂತ ನಮ್ಮನ್ನ ಕೊಂಡಾಡಿದ್ರು. ಆದರೆ ಮದುವೆಯಾಗಿ ಒಂದೇ ವರ್ಷದಲ್ಲಿ ಅವಳು ಎಷ್ಟು ಕಮರ್ಷಿಯಲ್ ಅಂತ ನನಗೆ ತಿಳೀತು, ನಾನ್ ಮಹತ್ವಾಕಾಂಕ್ಷಿ ಅಲ್ಲ, ಅವಳ ಗೆಳತಿಯರ ಮತ್ತು ಕಸಿನ್‌ಗಳ ಲೆವೆಲ್‌ಗೆ ನಾನು ಅವಳನ್ನು ನೋಡಿಕೊಳ್ಳೊಕಾಗಲ್ಲ ಅಂತ ಜಗಳ ಶುರು ಮಾಡಿದ್ಲು. ನಾವು ದೂರಾದ್ವಿ'.

'ನಮ್ ಜಾತಕ ನೋಡಿದ ಜ್ಯೋತಿಷಿ ನಮ್ಮಿಬ್ರುದು 36ಕ್ಕೆ 36 ಗುಣಗಳೂ ಹೊಂದಿಕೆಯಾಗುತ್ತೆ ಅಂತ ಹೇಳಿದ್ದ. ಆದ್ರೆ ನಮ್ಮಿಬ್ರುದು ಎರಡೇ ಎರಡು ಗುಣಾನೂ ಹೊಂದಿಕೆಯಾಗ್ತಿರ್ಲಿಲ್ಲ. ಅದ್ಕೆ ಇಬ್ರೂ ಮಾತಾಡ್ಕೊಂಡು ಮ್ಯುಚ್ಯುವಲ್ ಆಗಿ ಗೌರವದಿಂದಲೇ ದೂರಾದ್ವಿ. ಇನ್‌ಫ್ಯಾಕ್ಟ್ ನಾವು ಡಿವೋರ್ಸ್ ಫೋಟೋಶೂಟ್ ಕೂಡ ಮಾಡ್ಸಿದ್ವಿ. ಅದು ಸೋಷಿಯಲ್ ಮೀಡಿಯಾದಲ್ಲಿ ದೊಡ್ಡ ಟ್ರೆಂಡ್ ಆಗಿತ್ತು. ನಮ್ಮನ್ನ ನೋಡಿ ತುಂಬಾ ಜನ ಆ ಟ್ರೆಂಡ್ ಫಾಲೊ ಮಾಡಿದ್ರು. ಉಸಿರು ಬಿಗಿ ಹಿಡ್ಕೊಂಡು ಒಂದ್ ಸಂಬಂಧದಲ್ಲಿ ಇರೋಕಾಗುತ್ತಾ? **We should know when to quit people.'**

***

ಪ್ರೀ ವೆಡ್ಡಿಂಗ್ ಫೋಟೊಶೂಟ್‌ಗೆಂದು ಬಂದವರಿಗೆ ಡಿವೋರ್ಸ್ ಫೋಟೊಶೂಟ್ ಬಗ್ಗೆ ಕೇಳಿ ತಾವೇನೋ ತಪ್ಪು ಮಾಡ್ತಿದ್ದೇವೇನೋ ಅಂತ ಭಯ ಆಯ್ತು. ಒಂದೊಂದು ಮದುವೆಗಳೂ ತಂತಮ್ಮ ದುರಂತ ಅಂತ್ಯದ ಬಗ್ಗೆ ಮಾತನಾಡಿದ್ದನ್ನು ಕೇಳಿಸಿಕೊಂಡಾಗ ತಮ್ಮ ಮುಂದಿರುವ ಬದುಕು ಏನೋ ಒಂದು ವಿಚಿತ್ರ ಸವಾಲನ್ನು ತಮಗೆ ಎಸೆಯಲಿದೆಯೇನೋ ಎಂಬ ಶಂಕೆ ಇಬ್ಬರಲ್ಲೂ ಶುರುವಾಯಿತು. ಅಷ್ಟರಲ್ಲಿ ಸ್ಮಶಾನದ ಮೂಲೆಯಿಂದ ಎರಡು ಧ್ವನಿಗಳು ಒಟ್ಟಿಗೇ ಏನನ್ನೋ ಹೇಳುತ್ತಿರುವುದು ಅಸ್ಪಷ್ಟವಾಗಿ ಕೇಳಿಸಿದಂತಾಯಿತು. ಸಮರ್ಥ್ ಮತ್ತು ಸಹನಾ ಆ ಧ್ವನಿಗಳು ಬಂದ ಕಡೆ ಚಲಿಸತೊಡಗಿದರು.

